# 10

# “ಪರಿಪೂರ್ಣನಾಗಿರು” (2)

ದೇವರು ನಮ್ಮನ್ನು ಪರಲೋಕದೊಳಗೆ ತೆಗೆದುಕೊಂಡು ಹೋಗಲು ಪ್ರಯತ್ನಿಸುತ್ತಿರುವದಿಲ್ಲ; ಆತನು ಪರಲೋಕವನ್ನು ನಮ್ಮೊಳಗೆ ತರಲು ಪ್ರಯತ್ನಿಸುತ್ತಿದ್ದಾನೆ. ದೇವರು ನಮ್ಮನ್ನು ನರಕದೊಳಗಿಂದ ಹೊರಗಿಡಲು ಪ್ರಯತ್ನಿಸುತ್ತಿರುವದಿಲ್ಲ; ನರಕವನ್ನು ನಮ್ಮೊಳಗಿಂದ ಹೊರಗೆ ಹಾಕಲು ಆತನು ಪ್ರಯತ್ನಿಸುತ್ತಿದ್ದಾನೆ. “ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ” (ರೋಮಾಪು 3:10); “ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ” (ರೋಮಾಪುರ 3:23). ನಾನು ಪರಿಪೂರ್ಣನಾಗಿರಲಾರೆನು, ಆದಾಗ್ಯೂ ನಾನು ಪರಿಪೂರ್ಣನಾಗಿರಬೇಕೆಂದು ದೇವರು ಕೇಳುತ್ತಾನೆ! ಬಹಿರಾಚಾರಗಳಿಂದ ಯಾರೂ ಸಿದ್ಧಿಗೆ ಬರುವದಿಲ್ಲ (ಗಲಾತ್ಯ 3:3). ಪರ್ವತ ಪ್ರಸಂಗದಲ್ಲಿ ಯೇಸುವು, ನಾವು ಜೀವವನ್ನು *ಸಂಪಾದಿಸಲಾರೆವು* ಆದರೆ ಜೀವವನ್ನು *ಸ್ವೀಕರಿಸಬಲ್ಲೆವು* ಎಂದು ಹೇಳಿದ್ದಾನೆ. *ದೇವರಿಗೆ ಮಹಿಮೆಯಾಗಲಿ!* ಜೀವವನ್ನು *ಸಾಧಿಸಲು* ಪ್ರಯತ್ನಿಸಿದ್ದರಲ್ಲಿ ಪೌಲನು ನಿರಾಶನಾದನು (ರೋಮಾಪುರ 7). ಜೀವವನ್ನು *ಸ್ವೀಕರಿಸುವಲ್ಲಿ* ಅವನು ಆನಂದಭರಿತನಾದನು (ರೋಮಾಪುರ 8). ದೇವರೊಂದಿಗೆ ನಡೆಯುತ್ತಿರುವ ಮನುಷ್ಯನನ್ನು ನೀವು ಸೋಲಿಸಲಾರಿರಿ!

## ಧನ್ಯ ವಾಚಕಗಳು

ಪರಿಚಿತವಾದ ಅಗತ್ಯತೆಗಳು ಹೆಚ್ಚು ನಿಕಟವಾಗಿ ಓದಲ್ಪಡಬೇಕು. ಪರಿಪೂರ್ಣರಾಗಿರಬೇಕೆಂದು ಯೇಸುವು ನಮಗೆ ಹೇಳುವ ಮೊದಲು (ಮತ್ತಾಯ 5:48), “ಆದುದರಿಂದ ...” ಎಂದು ಆತನು ಹೇಳಿದನು. ಆತನು ಮೊದಲು ಬೋಧಿಸಿದ್ದರ ಕಾರಣದಿಂದ ಧನ್ಯವಾಚಕಗಳು, “ಆಶೀರ್ವದಿಸಲ್ಪಡುವದಕ್ಕಾಗಿ” ಮಾರ್ಗದರ್ಶನಗಳ ಕಾರಣದಿಂದ ನಾವು ಪರಿಪೂರ್ಣರಾಗಿರಬೇಕು. ಕೆಲವು ಆವೃತ್ತಿಗಳು “ಆನಂದ” ಎಂಬ ಭಾಷಾಂತರದೊಂದಿಗೆ ಯೇಸುವು ಉಪಯೋಗಿ ಸಿದ ಮಾತನ್ನು ಬೆಲೆಯಿಲ್ಲದ್ದನ್ನಾಗಿ ಮಾಡುತ್ತವೆ. ಜನರು ಇಂದು ಕುತೂಹಲಕ್ಕಾಗಿ, ಮನರಂಜನೆಗಾಗಿ “ತಮಾಷೆ ಮತ್ತು ಆಟಗಳಿಗಾಗಿ” ಆಸಕ್ತರಾಗಿರುತ್ತಾರೆ. ಯೇಸು ಉಪಯೋಗಿಸಿದ ಪದದ ಅರ್ಥ “ದೈವಿಕ ಧನ್ಯತೆ” ಎಂದಾಗಿದೆ. ಯೇಸುವು “ಮಾರ್ಗವೂ ಸತ್ಯವೂ ಜೀವವೂ” ಆಗಿದ್ದಾನೆ (ಯೋಹಾನ 14:6). ಯೇಸುವು ತನ್ನನ್ನು ಧನ್ಯವಾಚಕಗಳಲ್ಲಿ ಪರಿಚಯಿಸಿಕೊಂಡನು. ಅವು ಒಂದೇ ಆಗಿರುತ್ತವೆ: ಯೇಸುವು ಧನ್ಯವಾಚಕಗಳಾಗಿದ್ದಾನೆ; ಧನ್ಯವಾಚಕಗಳು ಯೇಸು ಆಗಿವೆ. ಈ ಗುಣಲಕ್ಷಣಗಳು ದೇವರ ಸ್ವಭಾವದಲ್ಲಿ ಬೇರೂರಲ್ಪಟ್ಟಿವೆ, ಮತ್ತು ಅವು ಒಂದರ ನಂತರ ಒಂದು ಇವೆ: ಆತ್ಮದಲ್ಲಿ ಬಡವರು, ದುಃಖಪಡುವವರು, ದೀನರು, ದೇವರಿಗಾಗಿ ಹಸಿವೆಯುಳ್ಳವರು, ನಿರ್ಮಲ ಹೃದಯರು ಈ ಗುಣಗಳು ಪರಿಪೂರ್ಣನಾಗಿರಲಿಕ್ಕೆ ತಳಹದಿಯಾಗಿವೆ.

“ಆತ್ಮದಲ್ಲಿ ಬಡವರು”ಆಗಿರಲಿಕ್ಕೆ ಸ್ವಾರ್ಥವನ್ನು ಅಲ್ಲಗಳೆಯಬೇಕು, ಸ್ವಾರ್ಥಕ್ಕೆ ಸಾಯಬೇಕು. ನಾವು ಪರಿಪೂರ್ಣರಾಗುವ ಮೊದಲು ನಾವು ಸ್ವಾರ್ಥವನ್ನು ತ್ಯಜಿಸಬೇಕು. ದೇವರು ಮಾಡಲಾರದಂಥ ಸಂಗತಿಗಳಿರುತ್ತವೆ. ತುಂಬಲ್ಪಟ್ಟಿರುವದನ್ನು ಆತನು ತುಂಬಲಾರನು. ಬರಿದಾದದ್ದನ್ನು ಮಾತ್ರವೇ ದೇವರು ತುಂಬಬಲ್ಲನು. “ತನ್ನ

ಪ್ರಾಣವನ್ನು ಕಂಡುಕೊಂಡವನು ಅದನ್ನು ಕಳಕೊಳ್ಳುವನು" (ಮತ್ತಾಯ 10:39) ಎಂದು ಯೇಸು ಹೇಳಿದ್ದಾನೆ. ನಮಗಿರುವ ಒಂದೇ ಸ್ವಾಸ್ತ್ಯವನ್ನು - ನಮ್ಮನ್ನು ತನಗೆ ಕೊಡಬೇಕೆಂದು ದೇವರು ಕೇಳುತ್ತಾನೆ, ನಾವು ಬಿಟ್ಟು ಕೊಡುವ ಕೊನೆಯ ಸಂಗತಿಯು ನಮ್ಮನ್ನೇ ಆಗಿರುತ್ತದೆ. ನಾವು ಅನೇಕ ಸಂಗತಿಗಳನ್ನು ಬಿಟ್ಟು ಕೊಡಬಹುದು (ಒಂದು ಪ್ರಯತ್ನವನ್ನು ಲೆಂಟ್ ಎಂದು [Lent] ಕರೆಯಲಾಗಿದೆ), ಆದರೆ ನಾವು ನಮ್ಮನ್ನು ಬಿಟ್ಟುಕೊಡುವದಿಲ್ಲ. ಮಿಶನರಿಗಳು ದುಃಖದಿಂದ ಹಿಂದಕ್ಕೆ ಬರುವಂತೆ ಯಾಕೆ ಸೋತುಹೋದರು? ಅವರು ತಮ್ಮ ಸಂಗತಿಗಳನ್ನು ಬಿಟ್ಟುಕೊಟ್ಟರು, ಆದರೆ ತಮ್ಮನ್ನೇ ಕೊಡಲಿಲ್ಲ. ಕೇಂದ್ರದಲ್ಲಿ ನಾವು ಸ್ವತಂತ್ರರಾಗುವವರೆಗೆ ನಾವು ಸ್ವತಂತ್ರರಾಗಿರಲಾರೆವು. ಮುರಿದು ಹೋದ ಮನುಷ್ಯನನ್ನು ನೀವು ಮುರಿಯಲಾರಿರಿ; ಸತ್ತುಹೋದ ಮನುಷ್ಯನನ್ನು ನೀವು ಕೊಲ್ಲಲಾರಿರಿ. ಪೌಲನು ಅನುದಿನವೂ ಸತ್ತನು (1 ಕೊರಿಂಥ 15:31). ಸತ್ತು ಹೋದ ಮನುಷ್ಯನು ಏನನ್ನು ಬಯಸುತ್ತಾನೆ?ಏನನ್ನೂ ಇಲ್ಲ! ವಿರೋದಾಭಾಸವಾಗಿ, ನಂಬಿಗಸ್ತ ಕ್ರೈಸ್ತನಿಗೆ ಯಾವುದೂ *ಇರುವದಿಲ್ಲ*, ಆದಾಗ್ಯೂ *ಎಲ್ಲವನ್ನೂ* ಹೊಂದಿಕೊಂಡಿರುತ್ತಾನೆ (2 ಕೊರಿಂಥ 6:10)!

## ಕ್ರಿಸ್ತನು ನಮ್ಮ ವಿಶ್ವಾಸವಾಗಿದ್ದಾನೆ

ನಾವು ಅಪರಿಪೂರ್ಣರಾಗಿರುತ್ತೇವೆ; ನಮ್ಮ ವಿಶ್ವಾಸವು ಪರಿಪೂರ್ಣತೆಯಲ್ಲಿರುತ್ತದೆ (ಕ್ರಿಸ್ತನಲ್ಲಿರುತ್ತದೆ). ನಮ್ಮ ವಿಶ್ವಾಸವು ಪರಿಪೂರ್ಣವಾಗಿರುವದಿಲ್ಲ; ನಮ್ಮ ವಿಶ್ವಾಸದ ಗುರಿಯು ಪರಿಪೂರ್ಣವಾಗಿದೆ. ಪೌಲನು ತನ್ನ ಸ್ವನೀತಿಯನ್ನು ಬಯಸಲಿಲ್ಲ, ಆದರೆ ನಂಬಿಕೆಯ ನೀತಿಯನ್ನು ಬಯಸಿದನು (ಕ್ರಿಸ್ತನ ನೀತಿ; ಫಿಲಿಪ್ಪಿ 3:7-10). ದೇವರು ನಮ್ಮ ಪಾಪವನ್ನು ಯೇಸುವಿನ ಮೇಲೆ ಹೊರಿಸಿದನು; ದೇವರು ತನ್ನ ನೀತಿಯನ್ನು ನಮ್ಮ ಮೇಲೆ ಹೊರಿಸಿದನು. ಇದು ಸುವಾರ್ತೆಯಾಗಿದೆ. *ಆಶ್ಚರ್ಯಕರವಾದ ಕೃಪೆ!* ದೇವರು ಕ್ರಿಸ್ತನಲ್ಲಿ ಪಾಪದ ಮೇಲೆ ತನ್ನ ರೋಷವನ್ನು ಸುರಿಸಿದನು (2 ಕೊರಿಂಥ 5:17-21). ಯೇಸುವು ಶಿಲುಬೆಯ ಮೇಲೆ ತನ್ನದಲ್ಲದ ಪಾಪವನ್ನು ತೆಗೆದುಕೊಂಡನು.

> ಯೇಸುವು ತನ್ನ ಜೀವವನ್ನು *ನಮಗಾಗಿ* ಕೊಟ್ಟನು -
> ಆದುದರಿಂದ ತನ್ನ ಜೀವವನ್ನು *ನಮಗಾಗಿ* ಕೊಡಬಲ್ಲವನಾದ -
> ಆದುದರಿಂದ ನಮ್ಮ *ಮುಖಾಂತರ* ತನ್ನ ಜೀವವನ್ನು ಜೀವಿಸಬಹುದಾದನು!

ಕಲ್ವಾರಿಯಲ್ಲಿ ಯೇಸುವಿನಲ್ಲಿ ದೇವರು ಮಾಡಿದ್ದಕ್ಕೆ ನಂಬಿಕೆಯು ನಮ್ಮ ಉತ್ತರವಾಗಿದೆ. ಮಾನವನು ಪಾಪದಲ್ಲಿ ತಪ್ಪಿಹೋದನು ಮತ್ತು ತನ್ನನ್ನು ತಾನೇ ರಕ್ಷಿಸಿಕೊಳ್ಳಲಾರದವನಾದನು. ಮಾನವನು ಮಾಡಲಾರದ್ದನ್ನು, ದೇವರು ಮಾನವನಲ್ಲಿ ಮಾಡಿದನು. ನಂಬಿಕೆಯು ನಮ್ಮನ್ನು *ಆತನವರನ್ನಾಗಿ* ಮಾಡುತ್ತದೆ! "ಆತನು ನನ್ನವನು ಮತ್ತು ನಾನು ಆತನವನು!" ಕ್ರಿಸ್ತನ, ಕ್ರಿಸ್ತ*ನಿಂದ* ಕ್ರಿಸ್ತನಿ*ಗಾಗಿ* ಇರುವ ಯಾವುದೇ ಸಂಗತಿಯು, ಕ್ರಿಸ್ತನ ಹೆಸರಿನಲ್ಲಿ *ಪರಿಪೂರ್ಣವಾದದ್ದಾಗಿದೆ!* ಇದು ನಮ್ಮ ನಿಮಿತ್ತವಾಗಿ ಅಲ್ಲ, ಆದರೆ ಆತನ ನಿಮಿತ್ತವಾಗಿ ಇರುವುದು. ಯೇಸುವು ಒಂದು ಜೀವನವನ್ನು ತೆಗೆದುಕೊಳ್ಳುವಾಗ, ತನ್ನ ರಕ್ತದಿಂದ ಅದನ್ನು ತೊಳೆಯುತ್ತಾನೆ ಮತ್ತು ಆಗ ಅದನ್ನು ದೇವರಿಗೆ ಒಪ್ಪಿಸುತ್ತಾನೆ, ಅದು *ಪರಿಪೂರ್ಣವಾದದ್ದಾಗಿರುತ್ತದೆ* (ಇಬ್ರಿಯ 10:14). ನಂಬಿಕೆಯ ಜೀವನವು ನಮಗೆ ನಿತ್ಯಜೀವವನ್ನು *ಕೊಡುವದಿಲ್ಲ* - ಅದು *ನಿತ್ಯ ಜೀವವಾಗಿರುತ್ತದೆ.* ನಮ್ಮಲ್ಲಿ ಪ್ರತಿಯೊಬ್ಬರು ಮೊದಲು "ನನ್ನೊಂದಿಗೆ"

ವ್ಯವಹರಿಸಬೇಕು. ನನ್ನನ್ನು ಪರಿಪೂರ್ಣತೆಯಿಂದ ದೂರವಿಡುವಂಥದ್ದನ್ನು ದ್ವೇಷಿಸಬೇಕು, ಅದರ ಬಗ್ಗೆ ಮಾನಸಾಂತರ ಪಡಬೇಕು, ಅರಿಕೆ ಮಾಡಬೇಕು, ತೆಗೆದು ಹಾಕಲ್ಪಡಬೇಕು. "ನಾನಿಲ್ಲದೇ ನೀವೇನನ್ನೂ ಮಾಡಲಾರಿರಿ" (ಯೋಹಾನ 15:5ಬಿ) ಎಂದು ಯೇಸು ಹೇಳಿದನು; "ನನ್ನಲ್ಲಿ ನೆಲೆಗೊಳ್ಳಿರಿ ಮತ್ತು ನಿಮ್ಮಲ್ಲಿ ನಾನು ನೆಲೆಗೊಂಡಿರುವೆನು" (ಯೋಹಾನ 15:4ಎ; ನೋಡಿರಿ ವಚನ 5). ಕ್ರಿಸ್ತನು ನನ್ನಲ್ಲಿ ರೂಪಿಸಲ್ಪಡುತ್ತಿರುವನೋ? ನಂಬಿಕೆಯು ನಮಗೆ *ತಿಳಿಸುವದಷ್ಟೇ* ಅಲ್ಲ, ಆದರೆ ಅದು ನಮ್ಮನ್ನು *ಮಾರ್ಪಡಿಸುತ್ತದೆ.*

"ಪರಿಪೂರ್ಣರಾಗಿರಿ."[1]

◇◇◇◇◇◇◇◇◇

# ಆರಾಧನೆ

## ಮತ್ತಾಯ 15:1-14

*"ಅದಿರಲಿ; ಸತ್ಯಭಾವದಿಂದ ದೇವಾರಾಧನೆ ಮಾಡುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ತಂದೆಯನ್ನು ಆರಾಧಿಸುವ ಕಾಲ ಬರುತ್ತದೆ; ಅದು ಈಗಲೇ ಬಂದಿದೆ; ತಂದೆಯು ತನ್ನನ್ನು ಆರಾಧಿಸುವವರು ಇಂಥವರೇ ಆಗಿರಬೇಕೆಂದು ಅಪೇಕ್ಷಿಸುತ್ತಾನಲ್ಲವೇ. ದೇವರು ಆತ್ಮಸ್ವರೂಪನು; ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು" (ಯೋಹಾನ 4:23, 24).*

ಆರಾಧನೆ! ಮನುಷ್ಯನು ಆರಾಧಿಸತಕ್ಕದ್ದು. ಅವರು ತಿಳಿಯಲಿ ಇಲ್ಲವೇ ತಿಳಿಯದಿರಲಿ, ಎಲ್ಲರೂ ಆರಾಧಿಸುವವರು. ಆರಾಧನೆ ಮಾಡದ ಸಮಾಜವು ಎಂದೂ ಇರಲಿಲ್ಲ. ಆರಾಧಿಸುವದಕ್ಕಾಗಿ ದೇವರು ಮನುಷ್ಯನನ್ನು ಸೃಷ್ಟಿಸಿದನು. ದೇವರು ಮನುಷ್ಯನನ್ನು ಸಮಯಕ್ಕಾಗಿ ಸೃಷ್ಟಿಸಲಿಲ್ಲ, ಆದರೆ ನಿತ್ಯತ್ವಕ್ಕಾಗಿ ಸೃಷ್ಟಿಸಿದನು. ವಿಗ್ರಹಾರಧನೆಯು ತಪ್ಪಾದ ದೇವರನ್ನು ಆರಾಧಿಸುವುದಾಗಿದೆ, ವಿಗ್ರಹಾರಧನೆಯು *ಸರಿಯಾದ* ದೇವರನ್ನು *ತಪ್ಪಾದ* ಮಾರ್ಗದಲ್ಲಿ ಆರಾಧಿಸುವಂಥದ್ದಾಗಿರಬಹುದು. ಪ್ರತಿಯೊಬ್ಬನೂ ಏನನ್ನಾದರೂ ಆರಾಧಿಸುತ್ತಾನೆ: ಪಂದ್ಯಾಟಗಳು, ಯಶಸ್ಸು, ಗರ್ವ, ಶಿಕ್ಷಣ, ಕುಟುಂಬ, ತಮಾಷೆ, ವ್ಯಾಪಾರ, ಹವ್ಯಾಸಗಳು, ಲೈಂಗಿಕತೆ, ಹಣ, ಇಲ್ಲವೇ ಅತ್ಯುನ್ನತ ಆಸಕ್ತಿಯು ಯಾವುದೇ ಇತರ ವಸ್ತುವನ್ನು ಆರಾಧಿಸಬಹುದು. ಜೀವನದಲ್ಲಿ ನಿಜವಾದ ವಿಷಯವು ಆರಾಧನೆಯಾಗಿರುವದಿಲ್ಲ, ಆದರೆ ಮನುಷ್ಯನು ಏನನ್ನು ಆರಾಧಿಸುವನೋ ಅದಾಗಿರುತ್ತದೆ. ನೀನು ಜನರಿಗೆ ತಿನ್ನುವದಕ್ಕೆ - ಕೇವಲ *ಏನನ್ನು* ತಿನ್ನಬೇಕು ಎಂಬುದನ್ನು ಬೋಧಿಸಬೇಕಾಗಿರುವದಿಲ್ಲ.

ನಮ್ಮ ಅನುದಿನದ ನಡೆಯುವಿಕೆಯು ಒಂದು "ಆರಾಧನೆಯ ನಡೆಯುವಿಕೆಯಾಗಿದೆ"; "ಪರಿಶುದ್ಧತ್ವವೆಂಬ ಭೂಷಣದೊಡನೆ ಯೆಹೋವನಿಗೆ ನಮಸ್ಕರಿಸಿರಿ" (1 ಪೂರ್ವಕಾಲವೃತ್ತಾಂತ 16:29; ಕೀರ್ತನೆ 29:2; 96:9). ಒಬ್ಬ ಕ್ರೈಸ್ತನು ತಲೆಯಿಂದ ಪಾದದವರೆಗೆ "ಸ್ತೋತ್ರ!" ಹೇಳುವವನಾಗಿರಬೇಕು (1 ಕೊರಿಂಥ 10:31). ಆರಾಧನೆಯು ದಿನನಿತ್ಯದ ನಡೆಯುವಿಕೆಯಲ್ಲಿ ಐಚ್ಛಿಕ ವಿಷಯವಾಗಿರುವದಿಲ್ಲ "ಇಂದು ನನಗೆ ಅದನ್ನು ಮಾಡಲಿಕ್ಕೆ ಮನಸ್ಸಾಗಲಿಲ್ಲ!" ಎಂದು ನಾವು

ಹೇಳಲಿಕ್ಕಾಗುವದಿಲ್ಲ. ನಮಗೆ ಮನಸ್ಸಿರಲಿ, ಇಲ್ಲದಿರಲಿ, ದೇವರಿಗೆ ನಮ್ಮ ಆರಾಧನೆಯು ಸಲ್ಲಿಸಲ್ಪಡಲೇ ತಕ್ಕದ್ದು. ನಿನಗೆ ತಪ್ಪು ಮನೋಭಾವನೆಯಿರುವಾಗಲೂ ಒಂದು ಸಂಗತಿಯನ್ನು ಮಾಡುವುದು ಸರಿಯಾದ ಮನೋಭಾವನೆಯಾಗಿರುತ್ತದೆ. ನಾವು ದೇವರನ್ನು ಆರಾಧಿಸುತ್ತೇವೆ; ನಾವು ಸ್ತೋತ್ರವನ್ನು ಆರಾಧನೆಯನ್ನು ಆರಾಧಿಸುವದಿಲ್ಲ. ಕೆಟ್ಟ ಸಂಗತಿಗಳು ಸಂಭವಿಸುವಾಗಲೂ ದೇವರು ಇನ್ನೂ ಸಿಂಹಾಸನದ ಮೇಲೆ ಇರುತ್ತಾನೆ. ಆರಾಧನೆಯು ದೇವರಿಗೆ ಸಲ್ಲಿಸಬೇಕಾದದ್ದನ್ನು ಸಲ್ಲಿಸುವುದಾಗಿದೆ. ಆರಾಧನೆಯಲ್ಲಿ ನಮಗೆ ದೇವರು ಹೇಗೆ ಮಹತ್ವವುಳ್ಳವನಾಗಿದ್ದಾನೆಂಬುದನ್ನು ಘೋಷಿಸುತ್ತೇವೆ! *ದೇವರು ದೇವರೇ ಆಗಿರಲಿ!*

ಸಭೆಯಲ್ಲಿ ಪ್ರಮುಖ ಅಂಶವು ಆರಾಧನೆಯಾಗಿದೆ. ಸಭೆಯು ಆರಾಧಿಸುವ ಸಮಾಜವಾಗಿದೆ. ಸಭೆಯು ಬೇರೆ ಯಾವುದನ್ನು ಮಾಡಿದರೂ ಅದು ಆರಾಧನೆ ಮಾಡುತ್ತದೆ. ಸಭೆಯೊಂದಿಗೆ ಮೂರು ಮಹಾ ಪದಗಳು ಸಂಬಂಧಿಸಿರುತ್ತವೆ: (1) *ವಾಕ್ಯ,* (2) *ಆರಾಧನೆ,* ಮತ್ತು (3) *ಕಾರ್ಯ.* ಇದು ಅವುಗಳ ಸರಣಿಯಾಗಿದೆ. *ವಾಕ್ಯವು ಆರಾಧನೆಯನ್ನು* ನಮಗೆ ಕಲಿಸುತ್ತದೆ. *ಆರಾಧನೆಯು ಕಾರ್ಯವನ್ನು* ಉತ್ಪಾದಿಸುತ್ತದೆ. ದೇವರು ಕೇಂದ್ರವಾಗಿರುವ ಆರಾಧನೆಯು ನಮ್ಮ ಪೂರ್ವ ಕಲ್ಪಿತವಾದದ್ದರಿಂದ ಬಿಡುಗಡೆ ಮಾಡುತ್ತದೆ. "ನಿನ್ನ ಕಾಲಿನ ಕೆರಗಳನ್ನು ತೆಗೆದು ಹಾಕು; ನೀನು ನಿಂತಿರುವ ಸ್ಥಳವು ಪರಿಶುದ್ಧ ಭೂಮಿ" (ವಿಮೋಚನಕಾಂಡ 3:5) ಎಂದು ದೇವರು ಮೋಶೆಗೆ ಹೇಳಿದನು. ದೇವರನ್ನು ತಿಳಿದುಕೋ, ದೇವರನ್ನು ನಂಬು ದೇವರಲ್ಲಿ ಭರವಸೆಯಿಡು, ದೇವರನ್ನು ಪ್ರೀತಿಸು, ಮತ್ತು ದೇವರಿಗೆ ವಿಧೇಯನಾಗು! ಸಭೆಗೆ ಅತ್ಯಗತ್ಯವಾದದ್ದು ದೇವರು - ಸೋಲುವ ಕಾರ್ಯಕ್ರಮಗಳನ್ನು ಕಾಪಾಡಲು ಹೊಸ ವಿಚಾರಗಳಲ್ಲ. ಆರಾಧನೆಯು "ಪರಿಶುದ್ಧ ಸ್ಥಳವಾಗಿದೆ," ಆದರೆ "ಆಟದ ಮೈದಾನವಾಗಿರುವದಿಲ್ಲ."

## ಆರಾಧನೆಯ ಕೇಂದ್ರೀಕರಿಸುವಿಕೆ

*ದೇವರು - ದೇವರು - ದೇವರು!* ಆರಾಧನೆಯ ಕೇಂದ್ರ ದೇವರು (ನಾವಲ್ಲ). "ದೇವರು ದೇವರಾಗಿದ್ದಾನೆ, ಮತ್ತು ನಾನು ದೇವರಾಗಿರುವದಿಲ್ಲ." ಅಪೊಸ್ತಲ ಯೋಹಾನನು ಒಬ್ಬ ದೇವದೂತನನ್ನು (ಎರಡು ಸಲ) ಆರಾಧಿಸಲು ಪ್ರಯತ್ನಿಸಿದಾಗ, ದೇವದೂತನು, "ದೇವರನ್ನು ಆರಾಧಿಸು" ಎಂದು ಹೇಳಿ ಅವನನ್ನು ಗದರಿಸಿದನು (ಪ್ರಕಟನೆ 22:9ಬಿ). ಭಾನುವಾರ ಸಭೆಯು ಕೂಡಿಬರುವಾಗ ಪ್ರಕಟಿಸುವವನು, "ಇಲ್ಲಿ ನಾವು ದೇವರನ್ನು ಆರಾಧಿಸಲಿಕ್ಕೆ ಬಂದಿದ್ದೇವೆ" ಎಂದು ಹೇಳುತ್ತಾನೆ. ಆರಾಧನೆಯು ದೇವರ ಪ್ರಸನ್ನತೆಗೆ ನಮ್ಮ ಉತ್ತರವಾಗಿದೆ. ದೇವರು ಶ್ರೋತೃಗಳ ಸಭೆಯಾಗಿದ್ದಾನೆ; ಶ್ರೋತೃಗಳ ಸಭೆಯು ದೇವರಾಗಿರುವದಿಲ್ಲ. ಮೂಲ ಪೂರ್ವಾಪೇಕ್ಷೆಯು ದೇವರ ಸನ್ನಿಧಿಗೆ ಹೋಗುವುದಾಗಿದೆ. ಆದುದರಿಂದ ಆರಾಧನೆಯು ದೇವರೊಂದಿಗೆ ಸಂಧಿಸುವುದಾಗಿದೆ. ಯೆಶಾಯ 6ರಲ್ಲಿ ಯೆಶಾಯನು ಎಂದಿನಂತೆ ಆರಾಧಿಸಲಿಕ್ಕೆ ಹೋದನು - ಆದರೆ ಈ ಸಲವು ಭಿನ್ನವಾಗಿತ್ತು. ಯಾಕಂದರೆ ಅವನು ದೇವರನ್ನು ನೋಡಿದನು. ದೇವರನ್ನು ನೋಡುವುದರಲ್ಲಿ ಅವನು ಆರಾಧಿಸಿದನು. ನೀವು ನೋಡುವಾಗ ನೀವು ಆರಾಧಿಸಿರಿ! ದೇವರನ್ನು ನೋಡಲು ನೀವು ಆರಾಧಿಸುವದಿಲ್ಲ. ನಾವು ದೇವರನ್ನು *ತಿಳಿದುಕೊಳ್ಳಬೇಕು,* ದೇವರನ್ನು *ಭಾವಿಸಬಾರದು.* ನಾವು ದೇವರನ್ನು ತಿಳಿದುಕೊಳ್ಳಬಹುದು, ಆದರೆ ಯಾವ ಮನುಷ್ಯನು ದೇವರನ್ನು ಭಾವಿಸುವದಿಲ್ಲ. ಆರಾಧನೆಯು ದೇವರನ್ನು ನೋಡುವುದಾಗಿದೆ, ದೇವರ ವೈಯಕ್ತಿಕ ಅನುಭವವನ್ನು

ಹೊಂದಿಕೊಳ್ಳುವದು ಆಗಿರುವದಿಲ್ಲ. ದೇವರನ್ನು ಆಲಿಸುವದರಿಂದ ಆರಾಧನೆಯು ಪ್ರಾರಂಭವಾಗುತ್ತದೆ, ಆದರೆ ಮಾತಾಡುವದರಿಂದ ಅಲ್ಲ. ದೇವರನ್ನು ನೋಡುವುದು ಮೌನದಲ್ಲಿ ಚಕಿತಗೊಂಡು ಕೃತಜ್ಞತೆಯಿಂದ ಪ್ರಭಾವಿತರಾಗುವುದಾಗಿದೆ. ಆರಾಧನೆಯು ಭೂಲೋಕದ ಮೇಲೆ ಸಂಭವಿಸಬಹುದಾದ ಅತೀ ಅವಸರದ, ವಿಶೇಷವಾದ ಮತ್ತು ಮಹಿಮೆಯುಳ್ಳ ಕೃತ್ಯವಾಗಿದೆ. ನಾವು ದೇವರನ್ನು ಸರಿಯಾಗಿ ಹೊಂದಿಕೊಳ್ಳುವಾಗ, ಆರಾಧನೆಯನ್ನು ನಾವು ಸರಿಯಾಗಿ ಹೊಂದಿಕೊಳ್ಳುತ್ತೇವೆ. ಅದೆಲ್ಲವೂ ದೇವರೊಂದಿಗೆ ಪ್ರಾರಂಭವಾಗುತ್ತದೆ.

ಆದುದರಿಂದ, ಸ್ವಾರ್ಥವನ್ನು ತೆಗೆದು ಹಾಕುವದರಿಂದ ಮಾತ್ರವೇ ಆರಾಧನೆಯು ಬರುತ್ತದೆ. ದೀನತೆಗಾಗಿ ನಾವು ಪ್ರಾರ್ಥಿಸುತ್ತೇವೆ; ವಾಸ್ತವಿಕತೆಯಲ್ಲಿ, ದೀನತೆಯು ಪ್ರಾರ್ಥನೆ ಮಾಡಲಿಕ್ಕೆ ನಮಗೆ ಕಾರಣವಾಗುತ್ತದೆ. ಆರಾಧನೆಯು ಸ್ವಾರ್ಥಕ್ಕೆ ಮರಣ ಗಂಟೆಯಾಗಿರುತ್ತದೆ. "ನಿಮ್ಮ ದೀನತೆಯ ಬಗ್ಗೆ" ನೀವು ಹೆಮ್ಮೆ ಪಟ್ಟುಕೊಳ್ಳ ಲಿಕ್ಕಾಗುವುದಿಲ್ಲ. ನಿಮ್ಮನ್ನು ನೀವು ಮೆಚ್ಚಿಸಿಕೊಳ್ಳಲು ಪ್ರಯತ್ನಿಸುವಾಗ ನೀವು ದೇವರನ್ನು ಆರಾಧಿಸಲಾರಿರಿ. "ಅದರಲ್ಲಿ ನನಗಾಗಿ ಏನಿದೆ?" ಎಂಬುದು ಆರಾಧನೆಯಾಗಿರುವದಿಲ್ಲ. ಆರಾಧನೆಯನ್ನು "ನಾನು ಮೆಚ್ಚಿಕೊಳ್ಳುತ್ತೇನೆ" ಇಲ್ಲವೇ "ನಾನು ಮೆಚ್ಚಿಕೊಳ್ಳುವದಿಲ್ಲ" ಎಂಬ ಮಟ್ಟಕ್ಕೆ ಕೆಳಗಿಳಿಸಲಾಗದು. "ಅದರೊಳಗಿಂದ ನನಗೆ ಏನೂ ಸಿಕ್ಕಲಿಲ್ಲ" ಎಂದು ಹೇಳುತ್ತ ಕೇವಲ ಸ್ವಾರ್ಥಿ ಸದಸ್ಯರು ಬಿಡುವರು. ಆಶೀರ್ವದಿಸಲ್ಪಡದೇ ಯಾವ ಮನುಷ್ಯನೂ ಎಂದಾದರೂ ದೇವರನ್ನು ನೋಡಿರುವದಿಲ್ಲ! ಆರಾಧನೆಯಲ್ಲಿ ನೀವು *ಕೊಡುವಿರಿ, ಹೊಂದಿಕೊಳ್ಳುವದಿಲ್ಲ!* ಆರಾಧನೆಯು "two scoops of warm fuzzies sprinkled with a little theology on top" ಆಗಿರುವದಿಲ್ಲ. ಆರಾಧನೆಯು ಖರ್ಚಿಗ ಳನ್ನು ಏರ್ಪಡಿಸುವದನ್ನು ದೀಪಗಳ ವ್ಯವಸ್ಥೆ ಮಾಡುವದನ್ನು ಒಳಗೊಂಡಿರುವದಿಲ್ಲ. *ಆರಾಧನೆಯನ್ನು ಸಂಗೀತ ಕುಣಿತದಿಂದ ತುಂಬಿಸಬೇಡಿರಿ.* ಆರಾಧನೆಯು ಮಕ್ಕಳ ಕಡೆಗೆ ತಿರುಗಿಸಲಾರದಷ್ಟು ಪರಿಶುದ್ಧವಾದದ್ದಾಗಿದೆ. ದೇವರನ್ನು ಮಹಿಮೆಪಡಿಸುವದನ್ನು ಹೊರತುಪಡಿಸಿ ಇತರ ಯಾವುದೇ ಉದ್ದೇಶಕ್ಕೆ ಆರಾಧನೆಯನ್ನು ಉಪಯೋಗಿ ಸುವುದು ಅದನ್ನು ದುರುಪಯೋಗಪಡಿಸುವಂಥದ್ದಾಗಿದೆ. ನಮ್ಮ ಇಂದಿನ ಅಗತ್ಯತೆಯು ಹಳೆಯದಕ್ಕೆ ಅಂಟಿಕೊಂಡಿರುವದಕ್ಕಾಗಲೀ ಇಲ್ಲವೇ ಹೊಸದರೊಂದಿಗೆ ಪ್ರಯೋಗ ಮಾಡುವದಕ್ಕಾಗಲೀ ಇರುವದಿಲ್ಲ; ನಮ್ಮ ಆರಾಧನೆಯಲ್ಲಿ ಮತ್ತು ನಮ್ಮ ಜೀವಿತಗ ಳಲ್ಲಿ ದೇವರ ಪ್ರಾಧಾನ್ಯತೆ ಇರುವುದು ನಮ್ಮ ಅಗತ್ಯತೆಯಾಗಿದೆ. ಪರಿಶುದ್ಧ ಸಂಗತಿಗಳ ಮಹತ್ವವನ್ನು ಕಡಿಮೆ ಮಾಡುವ ಯಾವನೂ ಆತ್ಮಿಕವಾಗಿ ಬೆಳೆಯುವದಿಲ್ಲ.

## ಆರಾಧನೆಯ ಕ್ರಮ

ಆರಾಧನೆಯು ಇಂದು ಒಂದು ಬಿಕ್ಕಟ್ಟಿನಲ್ಲಿ ಇರುತ್ತದೆ. ಮತ್ತು ಅದು ಮೂರು ಸಂಗತಿಗಳು ಅರ್ಥಮಾಡಿಕೊಳ್ಳಲ್ಪಟ್ಟು, ರೂಢಿಸಲ್ಪಡುವವರೆಗೆ ಅದು ಇರುವುದು. ಈ ಸಂಗತಿಗಳು ಯಾವವು? ಆರಾಧನೆಯು (1) *ಒಂದು ಪರಿಶುದ್ಧ ಸಮಯವನ್ನು*, (2) *ಒಂದು ಪರಿಶುದ್ಧ ಸ್ಥಳವನ್ನು*, ಮತ್ತು (3) *ಒಂದು ಪರಿಶುದ್ಧ ಮಾರ್ಗವನ್ನು* ಒಳಗೊಂಡಿರುತ್ತದೆ. ಅವುಗಳನ್ನು ಅಲ್ಲಗಳೆಯಲಿಕ್ಕಾಗುವದಿಲ್ಲ ಇಲ್ಲವೇ ತಿರಸ್ಕರಿಸಲಿಕ್ಕಾಗುವದಿಲ್ಲ. ಪ್ರಕಟನೆಯ ಗ್ರಂಥವು ಸತತವಾಗಿ "ಕರ್ತನ ದಿನದ"ದ ಬಗ್ಗೆ ಮಾತಾಡುತ್ತದೆ. ಭಾನು ವಾರವು ಭಿನ್ನತೆಯುಳ್ಳದ್ದಾಗಿದೆ. ಸಭೆಯು ಕರ್ತನ ದಿನದಂದು ಕೂಡಿ ಬರುತ್ತದೆ. ಕರ್ತನ ಭೋಜನವು ಸಭಾ ಕೂಟಕ್ಕೆ ಒಳಪಟ್ಟಿರುತ್ತದೆ. ವ್ಯಕ್ತಿಗಳಿಂದ ಅದು ಅಲ್ಲಿ ಇಲ್ಲಿ ಪ್ರತ್ಯೇಕವಾಗಿ ಮಾಡಲ್ಪಡುವದಿಲ್ಲ. ಹೊಸ ಒಡಂಬಡಿಕೆಯಲ್ಲಿ "ಕರ್ತನ ದಿನ" ಮತ್ತು

“ಕರ್ತನ ಭೋಜನ” ಸಂಬಂಧಿಸಲ್ಪಟ್ಟಿವೆ, ಅವುಗಳನ್ನು ಬೇರೆ ಬೇರೆ ಮಾಡಬಾರದು! ಸಭಾಕೂಟದ ಈ ಸಮಯದಲ್ಲಿ (ನೀವು “ಆರಾಧನೆಗೆ ಹೋಗುತ್ತೀರಿ”), ವಿಶಿಷ್ಟವಾದ ಸಂಗತಿಗಳು ಮಾಡಲ್ಪಡುತ್ತವೆ. ಹೌದು, ನಾವೆಲ್ಲರೂ ಯಾಜಕರಾಗಿರುತ್ತೇವೆ, ಆದರೆ ನಾವು *ಯಾವಾಗಲೂ* ಯಾಜಕರಂತೆ ಕಾರ್ಯ ಮಾಡುವದಿಲ್ಲ. ಆರಾಧನೆಯು ಪ್ರಾರಂಭವಾಗುತ್ತದೆ, ಆ ಮೇಲೆ ಮುಗಿಯುತ್ತದೆ. ನಾವು ಆರಾಧನೆಯಲ್ಲಿ ತೊಡಗಿರುವಾಗ ಕೆಲವೊಂದು ಸಂಗತಿಗಳು ಸಂಭವಿಸುತ್ತವೆ.

ನಾವು ಆತ್ಮದಲ್ಲಿಯೂ ಸತ್ಯದಲ್ಲಿಯೂ ಆರಾಧಿಸುತ್ತೇವೆ (ಯೋಹಾನ 4:23, 24). ಇದು ಮನೋಭಾವನೆಯನ್ನೂ ಕೃತ್ಯವನ್ನೂ *ಎರಡನ್ನೂ* ಒಳಗೊಂಡಿರುತ್ತದೆ. ಒಂದು ಇಲ್ಲದೇ ಒಂದು ಇರುವಂಥದ್ದು ನಮ್ಮ ಆರಾಧನೆಯನ್ನು ಅನರ್ಹಗೊಳಿಸುತ್ತದೆ. *ಒಂದೇ* ಒಂದು ಇರುವಂಥದ್ದು ಕಾನೂನು ಬದ್ಧತೆಯಾಗಿರುತ್ತದೆ ಇಲ್ಲವೇ ಹುಚ್ಚುತನವಾಗುತ್ತದೆ. ಆರಾಧನೆಯು ಅಂತರಿಕವಾದದ್ದನ್ನು ಮತ್ತು ಬಾಹ್ಯವಾದದ್ದನ್ನು *ಎರಡನ್ನೂ* ಒಳಗೊಂಡಿರುತ್ತದೆ. ನಿರೂಪಣೆಯಿಂದ ಆರಾಧನೆಯು ನಮ್ಮ ಹೃದಯಗಳನ್ನು ಪ್ರದರ್ಶಿಸುವ ಒಂದು ಕೃತ್ಯವಾಗಿರುತ್ತದೆ. ಆರಾಧನೆಯು ನಾವು ಮಾಡುವಂಥ ಸಂಗತಿಯಾಗಿರುತ್ತದೆ. ಭಾನುವಾರ ಸಹೋದರರು ಏನ್ನನಾದರು ಮಾಡಲಿಕ್ಕೆ ಕೂಟವಾಗಿ ಕೂಡಿಬರುತ್ತಾರೆ. ಅವರು ಕೇವಲ ಕೂತುಕೊಳ್ಳುವದಕ್ಕೆ ಬರಬಾರದು. “ದೇವಾಲಯದಲ್ಲಿ” ನಿದ್ರಿಸುವುದು ಆರಾಧಿಸುವದಾಗಿರುವದಿಲ್ಲ. ದೇವರು ಆರಾಧನೆಯನ್ನು ಯಾವಾಗಲೂ ಆಜ್ಞಾಪಿಸಿರುತ್ತಾನೆ. ಆರಾಧನೆಯಲ್ಲಿ ಸಂಭವಿಸ ಬೇಕಾದಂಥ ಕೆಲವು “ವಿಷಯಗಳನ್ನು” ದೇವರು ಯಾವಾಗಲೂ ಸ್ಪಷ್ಟಪಡಿಸಿದ್ದಾನೆ. ಕ್ರಮವು ಆರಾಧನೆಯಲ್ಲಿ ಅವಸರದ್ದಾಗಿದೆ.

ಚರಿತ್ರೆಯಲ್ಲಿ ಮೊದಲನೆಯ ಕೊಲೆಯು ಆರಾಧನೆಯ ಕ್ರಮದ ಮೇಲೆ ಬಂದಿತು. (ಆದಿಕಾಂಡ 4:3-8ರಲ್ಲಿ, ಕಾಯಿನ ಮತ್ತು ಹೇಬೇಲರ ವೃತ್ತಾಂತವನ್ನು ಓದಿರಿ.) ಆರಾಧನೆಯ ಕ್ರಮವನ್ನು ಅತಿಕ್ರಮಿಸಿದ್ದರಿಂದ ನಾದಾಬ ಮತ್ತು ಅಬಿಹು ಎಂಬವರು ಸಜೀವವಾಗಿ ದಹಿಸಲ್ಪಟ್ಟರು (ಯಾಜಕಕಾಂಡ 10:1, 2). ದೇವರಿಂದ ನಿರ್ದೇಶಿಸಲ್ಪಟ್ಟದ್ದನ್ನು ಅತಿಕ್ರಮಿಸಿ ಉಜ್ಜನು ಮಂಜೂಷವನ್ನು ಸ್ಪರ್ಶಿಸಿದ್ದರಿಂದ ಹತನಾದನು (2 ಸಮುವೇಲ 6:3, 6, 7). ಸರಿಯಾದ ದೇವರನ್ನು ಆರಾಧಿಸುವುದು ಸಾಕಾಗುವದಿಲ್ಲ. *ಸರಿಯಾದ* ದೇವರ *ಸರಿಯಾದ* ಆರಾಧನೆಯು ಸಹ ಇರತಕ್ಕದ್ದು! ಇಲ್ಲದಿದ್ದರೆ, “ನನಗೆ ಭಕ್ತಿ ತೋರಿಸುವದು ವ್ಯರ್ಥವೇ” ಎಂದು ದೇವರು ಹೇಳುತ್ತಾನೆ (ಮತ್ತಾಯ 15:9ಎ). ಕಾರ್ಯಕ್ರಮವನ್ನು ಎಂದೂ ಕ್ರಮದ ಮೇಲೆ ಇರಬೇಡಿರಿ! ಕ್ರಮವಿಲ್ಲದೇ ನೀವು ಕಾರ್ಯಕ್ರಮ ಮಾಡಲಾರಿರಿ. ಯೋಗ್ಯವಾದ ಕ್ರಮವು ಯೋಗ್ಯವಾದ ಕಾರ್ಯಕ್ರಮಕ್ಕೆ ಅನುಕೂಲ ಮಾಡಿಕೊಡುವುದು. ಪ್ರತಿಯೊಂದಕ್ಕೂ ಅವಕಾಶ ಕೊಡಬಹದೋ? ಆರಾಧನೆಯು ಸರ್ಕಸ್ ಆಗಿರುವುದೋ? ವಿಗ್ರಹಾರಧಕರಿಗೆ ಅವರ ಆರಾಧನೆಯಲ್ಲಿ ದೇವದಾಸಿಯರಿದ್ದರು. ನವೀನತೆಯು ಪರಿಶುದ್ಧ ಬರಹಗಳಲ್ಲಿ ಒಂದು ಸದ್ಗುಣವೇ ಆಗಿರಲಿಲ್ಲ. ಪ್ರಾಥಮಿಕ ಉದ್ದೇಶದ ಮೇಲೆ ದ್ವಿತಿಯ ಪರಿಣಾಮವನ್ನು ಹಾಕುವಾಗ ಆರಾಧನೆಯು ಕೆಡಿಸಲ್ಪಡುತ್ತದೆ.

ಆರಾಧನೆಯ “ಕೃತ್ಯಗಳು” ಗೇಲಿಮಾಡಲ್ಪಟ್ಟಿವೆ, ಆದರೆ ಆರಾಧನೆಯಲ್ಲಿ ಚಟುವಟಿಕೆಗಳನ್ನು ನೀವು ಏನು ಎಂದು ಕರೆಯುವಿರಿ? “ಬಹಿರಂಗ ಪಡಿಸುವಿಕೆಗಳು,” “ವ್ಯಕ್ತಪಡಿಸುವಿಕೆಗಳು” “ಸಾಧನಗಳು,” “ಮಾಧ್ಯಮಗಳು,”? “ಕೃತ್ಯಗಳಿಲ್ಲದೆ” (ನೀವು ಏನೆಂದಾದರೂ ಕರೆಯಿರಿ). ನಿಮಗೆ ಆರಾಧನೆ ಇರಲಾರದು, ಹೊಸ ಒಡಂಬಡಿಕೆಯಲ್ಲಿ ಕ್ರೈಸ್ತರು ಹಾಡಿದರು, ವಾಕ್ಯದ ಅಧ್ಯಯನ ಮಾಡಿದರು,

ಪ್ರಾರ್ಥಿಸಿದರು, ಅನ್ಯೋನ್ಯತೆ ಹೊಂದಿದರು, ಕೊಟ್ಟರು ಮತ್ತು ಕರ್ತನ ಭೋಜನವನ್ನು ಆಚರಿಸಿದರು. ಇವು ಆರಾಧನೆಯ "ಕೃತ್ಯಗಳಾಗಿದ್ದವು" ಪರಿಶುದ್ಧ ಬರಹಗಳಿಲ್ಲದೇ ಪರಿಶುದ್ಧ ಬರಹಕ್ಕನುಗುಣವಾಗಿದೆ ಎಂದು ಹೇಗೆ ಹೇಳಬಹುದು? ಆರಾಧನೆಯ ಬಗ್ಗೆ ನಾವು ಒತ್ತಿ ಹೇಳಬೇಕಾಗಿದ್ದಲ್ಲಿ ನಾವು ತಪ್ಪಾಗಿ "ಸಭೆಯ ಹಾಜರಾತಿಯ ಬಗ್ಗೆ" ಒತ್ತಿ ಹೇಳಿದ್ದೇವೆ.

ಆರಾಧನೆಯು ಚಲನಚಿತ್ರವಾಗಿಯಾಗಲೀ, ಸಂಗೀತಕಚೇರಿಯಾಗಲೀ, ಇಲ್ಲವೇ ಒಂದು ಅಭಿನಯವಾಗಲೀ ಆಗಿರುವದಿಲ್ಲ. ಆರಾಧನೆಯು ಮನೋರಂಜನೆಯಾಗಿರುವದಿಲ್ಲ. "ನಮ್ಮ ಆರಾಧನೆಯು ದೇವರನ್ನು ಮೆಚ್ಚಿಸುವುದೋ?" ಎಂಬ ಪ್ರಶ್ನೆಯು ಮಾಪಕವಾಗಿರುವುದು. ಅದರ ಬದಲು ಅದು ನಮ್ಮನ್ನು ಮೆಚ್ಚಿಸುವುದೋ? ಯೆಶಾಯ 1ರಲ್ಲಿ ಇಸ್ರಾಯೇಲ್ಯರ ಯಜ್ಞಗಳನ್ನು ತಾನು ದ್ವೇಷಿಸುವೆನು ಎಂದು ದೇವರು ಹೇಳಿದನು! ಅವರು ಆರಾಧನೆಯನ್ನು ಕೆಡಿಸಿದ್ದರು. ಯೆಶಾಯ 2ರಲ್ಲಿ ವಿಗ್ರಹಗಳಿಗಾಗಿ ಇಸ್ರಾಯೇಲ್ಯರು ದೇವರನ್ನು ಬಿಟ್ಟು ಹೋಗಿದ್ದರು. ಅವರು ಇನ್ನೂ ಧಾರ್ಮಿಕರಾಗಿದ್ದರು. ಆದಾಗ್ಯೂ ಅವರು ಶಿಕ್ಷಿಸಲ್ಪಟ್ಟಿದ್ದರು. ಆರಾಧನೆಯು ಭಾಗವಹಿಸುವಿಕೆಯನ್ನು ಕೇಳುತ್ತದೆ. ಗಮನಿಸುವಂಥದ್ದು ಕಾಯುವಂಥವರನ್ನಾಗಿ ಮಾಡುತ್ತದೆ. ಸಭೆಯಲ್ಲಿ ಗ್ರಾಹಕರು ತೆಗೆದುಕೊಳ್ಳುವವರಾಗಿದ್ದಾರೆ, ಕೊಡುವವರಾಗಿರುವದಿಲ್ಲ. ದೂರದರ್ಶನಗಳು ಧರ್ಮದೊಂದಿಗೆ ಮನೆಗಳಲ್ಲಿ ತುಂಬಿಕೊಂಡಿರುತ್ತವೆ. ಸುವಾರ್ತಾ ಪ್ರಸಂಗಿಗಳು ಅಂಥ "ಶೋಟೈಮ್"ದೊಂದಿಗೆ ಸ್ಪರ್ಧಿಸಲಾರರು. ನಮ್ಮ ರಿಮೋಟ್ ಕಂಟ್ರೋಲ್ ಯುನಿಟ್‌ಗಳೊಂದಿಗೆ, ನಮಗೆ ಯೋಗ್ಯವಾಗುವದನ್ನು ಕಂಡುಕೊಳ್ಳಲು ಚಾನ್ನೆಲ್ಲಿನಿಂದ ಚಾನ್ನೆಲ್ಲಿಗೆ ಬದಲಾಯಿಸುತ್ತೇವೆ. ನಮಗೆ ಬೇಸರವಾಗುವಾಗ, ನಾವು ಇನ್ನೊಂದು ಚಾನ್ನೆಲ್ಲಿಗೆ ಬದಲಾಯಿಸಬಹುದು. ಟಿಲಿವಿಜನ್ ಸಭೆಗೆ ಸಾಂಪ್ರದಾಯವಾಗಲಿ, ತತ್ವವಾಗಲಿ. ಲಿಟರ್ಜಿಯಾಗಲಿ, ಆತ್ಮಿಕ ಅಂತರ್ ದರ್ಶನವಾಗಲಿ ಇರುವುದಿಲ್ಲ! ಕ್ರಮಪ್ರಕಾರವಾಗಿ ನೋಡುವ ಜನರು. ನಿಜವಾದ ಸಭೆಯು ಹೀಗೆ ಇರುತ್ತದೆ ಎಂದು ಯೋಚಿಸುತ್ತಾರೆ. ಟೆಲಿವಿಜನ್ನಿಗೆ ವರವಿದೆ, ಪ್ರಖ್ಯಾತಿಯಿದೆ, ಭಾವೋದ್ವೇಗವಿದೆ. ದೈವಜ್ಞಾನ ಶಾಸ್ತ್ರಕ್ಕೆ ಭಕ್ತಿಭಾವನೆಗೆ, ವಿಚಾರಕ್ಕೆ ಬದಲಾವಣೆಗೆ ಇಲ್ಲವೇ ಶುದ್ಧವಿಚಾರಕ್ಕೆ ಸ್ಥಳವಿರುವದಿಲ್ಲ, ಆರಾಧನೆಯ ಅನಭವಗಳನ್ನು ಆರಾಧಿಸಬೇಡಿರಿ ಆರಾಧನೆಯ ಅನುಭವಗಳನ್ನು ಹುಟ್ಟಿಸಲು ಪ್ರಯತ್ನಿಸಬೇಡಿರಿ. ದೇವರನ್ನು ಹುಡುಕಿರಿ; ಪರಿಶುದ್ಧನಾದ ಕರ್ತನ ಮುಂದೆ ಭಯಭಕ್ತಿಯಿಂದ ಬಿದ್ದುಕೊಳ್ಳಿರಿ!

ಆರಾಧನೆಗೆ (1) *ಒಂದು ಪರಿಶುದ್ಧ ಸಮಯ,* (2) *ಒಂದು ಪರಿಶುದ್ಧ ಸ್ಥಳ,* ಮತ್ತು (3) *ಒಂದು ಪರಿಶುದ್ಧ ಮಾರ್ಗ* ಇರುತ್ತದೆ. ದೇವರನ್ನು ಆರಾಧಿಸಿರಿ.

## ಆರಾಧನೆಯ ಕಾರ್ಯ

ಆರಾಧನೆಗೆ ಸರಿಯಾದ ಮಾರ್ಗ ಮತ್ತು ತಪ್ಪಾದ ಮಾರ್ಗಗಳು ಇರುತ್ತವೆ. ಸರಿಯಾದ ಸಮಯ, ಸ್ಥಳ ಮತ್ತು ಕ್ರಮ (ಮಾರ್ಗ) ಯೋಗ್ಯವಾದ ಕಾರ್ಯಮಾಡಲಿಕ್ಕೆ ಸಹಾಯ ಮಾಡುತ್ತದೆ. ಆರಾಧನೆಯು ಸಭೆಯು ಮಾಡುವ ಪ್ರತಿಯೊಂದರಲ್ಲಿಯ ಕೇಂದ್ರವಾಗಿರುತ್ತದೆ. ಆರಾಧನೆಯಲ್ಲಿ ಸಭೆಯು ಸಭೆಯಾಗಿರುತ್ತದೆ. ಆರಾಧಿಸದೇ ಇರುವಂಥವರು ಕೆಲಸವಿಲ್ಲದವರಾಗಿರುತ್ತಾರೆ. ದೇವರು ಅನಂತರ ಬಾಯಾರಿಕೆಯುಳ್ಳವನಾಗಿರಲು ಬಾಯಾರಿಕೆಯುಳ್ಳವನಾಗಿರುತ್ತಾನೆ. ಸೈತಾನನೂ ಸಹ ನಮ್ಮ ಆರಾಧನೆಯನ್ನು ಅಪೇಕ್ಷಿಸುತ್ತಾನೆ. ಅವನು "ಈ ಜಗತ್ತಿನ ದೇವರು" ಆಗಿರುತ್ತಾನೆ (2 ಕೊರಿಂಥ 4:4ಎ). ತನ್ನನ್ನು ಆರಾಧಿಸುವಂತೆ ಅವನು ಯೇಸುವನ್ನು

ಶೋಧಿಸಿದನು (ಮತ್ತಾಯ 4). ಸಭೆಯು ದೇವರನ್ನು ಆರಾಧಿಸದೇ ಇರುವವರೆಗೆ, ಸಭೆಯು ಏನು ಮಾಡುತ್ತದೆ ಎಂಬುದರ ಬಗ್ಗೆ ಸೈತಾನನು ಚಿಂತಿಸುವದಿಲ್ಲ. ಈ ಕಾರಣದಿಂದ ನಮ್ಮ ಆರಾಧನೆಯನ್ನು ಕೆಡಿಸಲಿಕ್ಕೆ ಸೈತಾನನು ಬಲವಾಗಿ ಕಾರ್ಯ ಮಾಡುತ್ತಾನೆ. ಜಗತ್ತಿಗೆ ಕೇವಲ ನಿರೀಕ್ಷೆಯು ಸಭೆಯಾಗಿದೆ; ಸಭೆಗಾಗಿ ಕೇವಲ ನಿರೀಕ್ಷೆಯು ಆರಾಧನೆಯಾಗಿದೆ; ಆದಿ ಸಭೆಯು ಆರಾಧಿಸುವ ಸಭೆಯಾಗಿದ್ದರಿಂದ ಅದು ಆತ್ಮಗಳನ್ನು ರಕ್ಷಸಿತು. ಭಾನುವಾರದ ಆರಾಧನೆಯ ತಾಸು, ವಾರದ ಅತೀ ಹೆಚ್ಚು ಸ್ವಾರ್ಥದ ತಾಸಾಗಿರಬಾರದು. ಆಳವಾದ ನಾಸ್ತಿಕವಾದವು ಸಮಕಾಲಿನ ಆರಾಧನೆಯಲ್ಲಿ ಹೊಂಚು ಹಾಕುತ್ತಲಿದೆ. ಸ್ವಯಂ ಸೇವೆ ಮಾಡಿಕೊಳ್ಳುವ ಆರಾಧನೆಯು ಆರಾಧನೆಯಾಗಿರುವದಿಲ್ಲ. ಆರಾಧನೆಯಲ್ಲಿ (ಅನುಭವಗಳಲ್ಲಿ) ನನಗೆ ಏನು ಸಂಭವಿಸುತ್ತದೆ ಎಂಬುದರ ಸಮಿಕ್ಷೆ ಮಾಡುವುದು ನನ್ನನ್ನು "ದೇವರನ್ನಾಗಿ" ಮಾಡುತ್ತದೆ, ಮನುಷ್ಯನನ್ನಾಗಿ ಅಲ್ಲ. ಆರಾಧನೆಯೊಂದಿಗೆ ಸ್ವಯಂ ಸಂತೃಪ್ತಿಯನ್ನು ನಾವು ಸರಿಸಮಾನವಾಗಿ ಮಾಡುವಾಗ ಯಾವುದೋ ಒಂದು ತಪ್ಪಾಗಿರುತ್ತದೆ. ಆರಾಧನೆಯು ಉನ್ನತ ಸ್ತೋತ್ರಕ್ಕೆ ಹಾಗೂ ಪರಿಶುದ್ಧ ಜೀವಿಸುವಿಕೆಗೆ ನಮ್ಮ ದೇವರು ಕೇಂದ್ರವಾಗಿರುವ ಕರೆಯಾಗಿರುತ್ತದೆ. ಆರಾಧನೆಗೆ ಸಂಬಂಧಿಸಿ ದೇವರು ಅದರಿಂದ ಏನನ್ನು ಪಡೆದುಕೊಳ್ಳುತ್ತಾನೆ ಇಲ್ಲವೇ ಅವರು ಅದರಿಂದ ಏನನ್ನು ಪಡೆದುಕೊಳ್ಳುವರು ಎಂಬುದನ್ನು ಜನರಿಗೆ ಹೇಳಬೇಡಿರಿ; ಅದು ಸರಿಯಾದದ್ದಾಗಿರುವದರಿಂದ ದೇವರನ್ನು ಕೊಂಡಾಡಲು ಅವರಿಗೆ ಹೇಳಿರಿ!

ಪರಿಶುದ್ಧ ಬರಹಗಳಲ್ಲಿ ಪರಿಚಿತವಾದದ್ದನ್ನು ಹೆಚ್ಚು ಸಮೀಪವಾಗಿ ಓದುವ ಅಗತ್ಯತೆಯಿರುತ್ತದೆ. ಓದಿರಿ ಯೋಹಾನ 4:23. ಮುಖ್ಯ ಪದವು "ಆರಾಧಕರು." ನಿರೂಪಿಸಲು, ಕಾರ್ಯಕ್ರಮ ಮಾಡಲು ಆರಾಧನೆಯನ್ನು ಸೃಷ್ಟಿಸಲು ನಾವು ಪ್ರಯತ್ನಿಸುತ್ತೇವೆ. ದೇವರು "ಆರಾಧಕರನ್ನು" ಮಾಡುತ್ತಾನೆ. ನಿಜವಾದ ಆರಾಧಕರು ಮಾತ್ರವೇ ಆರಾಧಿಸುತ್ತಾರೆ. ಆರಾಧಿಸಲಿಕ್ಕೆ ಬೀಗದ ಕೈ ಆರಾಧಕನಲ್ಲಿರುತ್ತದೆ. ಸದಸ್ಯರನ್ನು ಅತಿಯಾಗಿ ಕೇಳುವದರಿಂದ, ಸಭೆಯು ಸೋತು ಹೋಗುತ್ತಿರುವದಿಲ್ಲ; ಅದು ಬಹಳ ಸ್ವಲ್ಪವಾದದ್ದನ್ನು ಕೇಳುವ ಕಾರಣದಿಂದ ಸೋತು ಹೋಗುತ್ತಲಿದೆ. ಆರಾಧನೆಯು ಒಂದು ಆಕಸ್ಮಿಕವಾಗಿರುವದಿಲ್ಲ. "ಆರಾಧನೆಯ" ಮೇಲೆ ನಾವು ಕಾರ್ಯ ಮಾಡುತ್ತೇವೆ. "ಆರಾಧಕರ ಮೇಲೆ" ದೇವರು ಕಾರ್ಯ ಮಾಡುತ್ತಾನೆ. ಆರಾಧನೆಯಲ್ಲಿ ಜನರು ಯಾವುದನ್ನೂ ತೊಡಗಿಸದೇ ಇರುವ ಕಾರಣದಿಂದ, ಆರಾಧನೆಯಿಂದ ಅವರು ಏನನ್ನೂ ಪಡೆದುಕೊಳ್ಳುತ್ತಿರುವದಿಲ್ಲ.

ಇದು ಸಿದ್ಧತೆಯನ್ನು ಕೇಳುತ್ತದೆ. ಭಾನುವಾರದ ಕೂಟವು ವಾರದ ಮುಖ್ಯಾಂಶವಾಗಿರಬೇಕು. ಸದಸ್ಯರು ಅದನ್ನು ಯೋಚಿಸಬೇಕು, ಅನುದಿನ ಧ್ಯಾನಮಾಡಬೇಕು, ಮತ್ತು ಅದರ ಬಗ್ಗೆ ಪ್ರಾರ್ಥಿಸಬೇಕು. ಸದಸ್ಯರು ಆರಾಧಿಸಲಿಕ್ಕೆ ಸಿದ್ಧರಾಗಿ ಬರತಕ್ಕದ್ದು. ಆರಾಧನೆಗಾಗಿ ಸಿದ್ಧಪಡುವಲ್ಲಿ, ನಿಮ್ಮ ಶನಿವಾರ ರಾತ್ರಿಗಳನ್ನು ಕಾಪಾಡಿಕೊಳ್ಳಿರಿ! ಪಾಪಿಗಳನ್ನು ರಕ್ಷಿಸುವದಕ್ಕಾಗಿ ದೇವರ ಯೋಜನೆಯು ಅವರನ್ನು ನಿಜವಾದ ಆರಾಧಕರನ್ನಾಗಿ ಮಾಡುತ್ತದೆ. ಆರಾಧನೆಯಲ್ಲಿ ದೇವರ ಸನ್ನಿಧಿಯಲ್ಲಿ ನಾವು ಒಳಪಟ್ಟವರಲ್ಲ ಎಂಬುದನ್ನು ತಿಳಿದಿರುತ್ತೇವೆ, ಆದಾಗ್ಯೂ ನಾವು ಅಲ್ಲಿರುತ್ತೇವೆ! ನಾವು ಅದಕ್ಕೆ ಅರ್ಹರಲ್ಲ - ಅದು ದೇವರ ಕೃಪೆಯಿಂದ ಆಗಿರುತ್ತದೆ. ಆರಾಧನೆಯನ್ನು ಗಂಭೀರವಾಗಿ ತೆಗೆದುಕೊಳ್ಳಿರಿ, "ನಾವು ನಮ್ಮ ಕೆಲಸವನ್ನು ಆರಾಧಿಸುತ್ತೇವೆ, ನಮ್ಮ ಆಟದಲ್ಲಿ ಕೆಲಸ ಮಾಡುತ್ತೇವೆ, ಮತ್ತು ನಮ್ಮ ಆರಾಧನೆಯಲ್ಲಿ ಆಟವಾ ಡುತ್ತೇವೆ" ಎಂದು ಯಾರೋ ಒಬ್ಬರು ಗಮನಿಸಿದ್ದಾರೆ. ನಾವು ರಕ್ಷಿಸಲ್ಪಡಲಿಕ್ಕಾಗಿ ಮಾತ್ರವೇ ರಕ್ಷಿಸಲ್ಪಟ್ಟಿರುವದಿಲ್ಲ, ಸೇವೆ ಮಾಡುವದಕ್ಕಾಗಿ ರಕ್ಷಿಸಲ್ಪಟ್ಟಿದ್ದೇವೆ. ಆತ್ಮಿಕ ಜನರು ಆತ್ಮಿಕ ಆರಾಧನೆ ಮಾಡುತ್ತಾರೆ. ಆರಾಧನೆಯು ಸಮಯವನ್ನು ಪ್ರಯತ್ನವನ್ನು ಮತ್ತು

ತ್ಯಾಗವನ್ನು ಕೇಳುತ್ತದೆ. ಆರಾಧನೆಯು ಕೆಲಸವಾಗಿರುತ್ತದೆ. ಆರಾಧನೆಯು ಭಾಗವಹಿಸುವಿಕೆಯಾಗಿರುತ್ತದೆ. ಆರಾಧನೆಯು ನಮಗಿಂತ ಹೆಚ್ಚು ದೊಡ್ಡದಾದ ಯಾವುದಕ್ಕೂ ನಮ್ಮನ್ನು ಒಪ್ಪಿಸಿಕೊಡುವದಕ್ಕಾಗಿ ಒಂದು ಮಾರ್ಗವನ್ನು ಕಂಡುಕೊಳ್ಳುವುದಾಗಿದೆ. ತನ್ನಿಷ್ಟಕ್ಕಾಗಿ ಜೀವಿಸುವ ಸಭೆಯು ಸಾಯುವ ಸಭೆಯಾಗಿರುತ್ತದೆ.

ಆರಾಧನೆಯು ದೇವರ ವಾಕ್ಯದ ಸತ್ಯವನ್ನು ಕಲಿಯುವದರಿಂದ ಪರಿಣಾಮಗೊಳ್ಳುತ್ತದೆ! ಬೈಬಲಿನ ಅಜ್ಞಾನವು ಅಗಾಧವಾದ ಆರಾಧನೆಯಲ್ಲಿ ಪರಿಣಾಮಗೊಳ್ಳುವದಿಲ್ಲ. ಆಳವಾಗಿರುವ ಆರಾಧನೆಯು ಮಾತ್ರವೇ ಬೈಬಲ್ ಪ್ರಸಂಗಿಸುವಿಕೆಯಿಂದ ಬರುವುದು. ನಾನು ಹೇಗೆ ಜೀವಿಸುತ್ತೇನೆ ಎಂಬುದು ದೇವರ ಬಗ್ಗೆ ನಾನು ಏನು ನಂಬುವೆನೋ ಅದರ ಸಾಕ್ಷಿಯಾಗಿರುವುದು. ನಾವು ನಂಬುವಂಥದ್ದು ನಾವು ಮಾಡುವಂಥದ್ದನ್ನು ನಿರ್ಧರಿಸುವುದು. ನಿಜವಾದ ಆರಾಧನೆಯು ನಿಜವಾದ ಜಗತ್ತಿಗಾಗಿ ನಮ್ಮನ್ನು ಸಿದ್ಧಪಡಿಸುತ್ತದೆ. ಅತ್ಯುತ್ತಮವಾದ ಬಹಿರಂಗ ಆರಾಧನೆಯು ಅತ್ಯುತ್ತಮವಾದ ವೈಯಕ್ತಿಕ ಜೀವಿತಗಳನ್ನು ಉತ್ಪಾದಿಸುವಂಥದ್ದಾಗಿದೆ. ಒಬ್ಬನು ಆರಾಧನೆಯ ಕೂಟವನ್ನು ಹೇಗೆ ಮೌಲ್ಯಮಾಪನ ಮಾಡುತ್ತಾನೆ, ಹೆಚ್ಚು ಉತ್ತಮ ಕ್ರೈಸ್ತನನ್ನು ಬಿಡುವದರಿಂದ! ದೇವರೊಂದಿಗಿನ ಪ್ರೀತಿಯ ಸಂಬಂಧವು ದೇವರೊಂದಿಗಿನ ನಮ್ಮ ಅನುದಿನದ ನಡೆಯುವಿಕೆಯಲ್ಲಿ ಅತ್ಯಂತ ಮಹತ್ವದ ಸಂಗತಿಯಾಗಿರುತ್ತದೆ. ಆರಾಧನೆಯಲ್ಲಿ ಅದೃಶ್ಯವಾದದ್ದನ್ನು, ನೋಡುವದನ್ನು, ತಿಳಿಯದೇ ಇರುವಂಥದ್ದನ್ನು ತಿಳಿಯಲು, ಅಗ್ರಾಹ್ಯವಾದದ್ದನ್ನು ಗ್ರಹಿಸಿಕೊಳ್ಳಲು ಮತ್ತು ನಿತ್ಯವಾದದ್ದನ್ನು ಅನುಭವಿಸುವದನ್ನು ನೋಡಲು ನಾವು ಹುಡುಕುತ್ತೇವೆ.

ನಾವು ಆರಾಧಿಸುವಾತನಂತೆ ನಾವು ಆಗುತ್ತೇವೆ. ಮೂರ್ತಿಗಳನ್ನು ಆರಾಧಿಸುವುದು ನಮ್ಮನ್ನು ಸ್ವಾರ್ಥಿಗಳನ್ನಾಗಿಯೂ ಅನೀತಿವಂತರನ್ನಾಗಿಯೂ ಮಾಡತ್ತದೆ. ಆರಾಧನೆಯ ಗುಣದಿಂದ ಜೀವನದ ನಡತೆ ಬರುತ್ತದೆ. ಒಂದು ಬದಲಾವಣೆಯನ್ನು ಅನುಭವಿಸದೇ ಒಬ್ಬನು ಯಾವುದನ್ನೂ ಆರಾಧಿಸಲಾರನು. ಆರಾಧನೆಯು ವಿಧೇಯತೆಯಲ್ಲಿ ಬೇರೂರಿರುತ್ತದೆ. ಆರಾಧನೆಯು ನಮ್ಮ ಜೀವನದ ಪುನಃ ತರಬೇತಿಯಾಗಿರುತ್ತದೆ. ಆರಾಧನೆಯಿಲ್ಲದೆ, ನಾವು ಹಿಂದಕ್ಕೆ ಹೋಗುತ್ತೇವೆ ಮತ್ತು ನಿಧಾನಗೊಳ್ಳುತ್ತೇವೆ, ಆರಾಧನೆಯು ಕ್ರಿಸ್ತನ ಒಡೆತನಕ್ಕೆ ಒಬ್ಬನ ಪೂರ್ಣ ಜೀವನದಿಂದ ಮತ್ತು ಇರುವಿಕೆಯಿಂದ ಉತ್ತರ ಕೊಡುವಂಥದ್ದಾಗಿದೆ. ನಮ್ಮ ಭಾನುವಾರವು ನಮ್ಮ ವಾರದ ದಿನಗಳನ್ನು ತೀರ್ಮಾನಿಸತಕ್ಕದ್ದು. ಆರಾಧನೆಯು ನೋಟದ ಆಟವಾಗಿರುವದಿಲ್ಲ.

ಪ್ರಕಟನೆಯ ಒಂದು ಸಮೀಕ್ಷೆಯಿಂದ ಪರಲೋಕದ ಕೇಂದ್ರ ಚಟುವಟಿಕೆಯ ಆರಾಧನೆ ಎಂದು ನಿರ್ಧರಿಸಲ್ಪಟ್ಟಿದೆ. ನಮ್ಮ ಆರಾಧನೆಯಲ್ಲಿ ಬರಲಿಕ್ಕಿದ್ದ ಪರಲೋಕದ ರುಚಿಯನ್ನು ಪಡೆದುಕೊಳ್ಳುತ್ತೇವೆ. ಬಹುಶಃ ನಾವು ಕಠಿಣವಾಗಿ ರೂಢಿಸತಕ್ಕದ್ದು.

***ಬನ್ನಿರಿ, ನನ್ನೊಂದಿಗೆ ನಡೆಯಿರಿ.***

---

ಟಿಪ್ಪಣಿ

[1]ಈ ಭಾಗದಲ್ಲಿ ಸಹಾಯ ಮಾಡಿದ ಡೇವಿಡ್ ರೆಚ್ಚಿನ್ ಅವರಿಗೆ ಗ್ರಂಥಕರ್ತನು ಬಹಳ ಕೃತಜ್ಞತೆಸಲ್ಲಿಸುತ್ತಾನೆ.

© 2009 Truth for Today